ಶೈಲಿಯು ವಿಚಿತ್ರ ರೀತಿಯಲ್ಲಿ ನನಗೆ ಇಷ್ಟವಾಯಿತು. ಈ ಬಾರಿ ಅವರನ್ನು ಓದುವ ವೇಳೆಗೆ ಮಿಲನ್ ಕುಂದೆರಾ, ಗಾರ್ಸಿಯಾ ಮಾರ್ಕೇಸ್‌ರಂಥ ಪಾಶ್ಚಾತ್ಯ ಲೇಖಕರನ್ನು ಓದಿ, ಅವರ ನಾನ್ ಕಾನ್ಫಾರ್ಮಿಸ್ಟ್ ಶೈಲಿಯ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡಿದ್ದೆ. ಈಗ ಓದಿದಾಗ ನನಗೆ ರಶ್ದಿಯವರು ಯಾಕೆ ನಮ್ಮ ತಲೆಮಾರಿನ ಮುಖ್ಯ ಲೇಖಕರಲ್ಲಿ ಒಬ್ಬರಾಗಿ ನಿಲ್ಲುತ್ತಾರೆ ಎನ್ನುವುದು ಬಿಡಿಸಿಕೊಳ್ಳುತ್ತಿತ್ತು. ಅದೇ ಕಾಲಕ್ಕೆ ಅವರ ಇತರ ಪಠ್ಯಗಳನ್ನೂ ಓದುವ ಅವಕಾಶ ಉಂಟಾಯಿತು. ಅದರಲ್ಲಿ ಮುಖ್ಯವಾದದ್ದು 2021ರಲ್ಲಿ ಪ್ರಕಟವಾದ 'ಲಾಂಗ್ವೇಜಸ್ ಆಫ್ ಟ್ರೂತ್'.

2003ರಿಂದ 2020ರವರೆಗಿನ ಸುಮಾರು ಎರಡು ದಶಕಗಳ ಕಾಲ ರಶ್ದಿ ಮಾಡಿದ ಭಾಷಣಗಳು, ಬರೆದ ಪ್ರಬಂಧಗಳ ಸಂಕಲನ 'ಲಾಂಗ್ವೇಜಸ್ ಆಫ್ ಟ್ರೂತ್'. ಇದನ್ನು ಅವರು ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಮೊದಲ ಭಾಗದಲ್ಲಿ ಕಥನ ತಂತ್ರಗಳ ಬಗ್ಗೆ, ಎರಡನೆಯದ್ದರಲ್ಲಿ ಇತರ ಪ್ರಮುಖ ಲೇಖಕರ ಬಗ್ಗೆ, ಮೂರನೇ ಭಾಗದಲ್ಲಿ ಸತ್ಯ-ಧೈರ್ಯಗಳ ಸುತ್ತಮುತ್ತಲ ಪ್ರಕರಣ-ವ್ಯಕ್ತಿತ್ವಗಳ ಬಗ್ಗೆ ಮತ್ತು ನಾಲ್ಕನೇ ಭಾಗದಲ್ಲಿ ಕಲೆಯ ಬಗ್ಗೆ ಬರೆದಿದ್ದಾರೆ. ಎಲ್ಲ ಭಾಷಣ-ಲೇಖನಗಳೂ, ಮೂಲ ಕಾಲದಿಂದ ಪ್ರಕಟಣೆಯ ಕಾಲಕ್ಕೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈ ಲೇಖನ ಗುಚ್ಛದಲ್ಲಿ ಬರಹಗಾರನ ಪ್ರೇರಣೆಗಳು, ನಿಜ ಜೀವನದ ಪಾತ್ರಗಳು ಕಥೆಗಳಲ್ಲಿ ಹೇಗೆ ಬದಲಾಗುತ್ತವೆ ಎನ್ನುವುದು ತಿಳಿಯುವುದರ ಜೊತೆಗೆ, ಬರಹದ ತಂತ್ರ ಮತ್ತು ನಿಲುವುಗಳ ಬಗ್ಗೆ ರಶ್ದಿ ಅವರ ವಿಸ್ತೃತ ವಿಚಾರಮಂಥನ ಗಮನಸೆಳೆಯುತ್ತದೆ.

ಲೇಖಕನೊಬ್ಬ ತನ್ನ ತಲೆಯ ಮೇಲೆ ಫತ್ವಾ ಹೊತ್ತು, ಅಜ್ಞಾತನಾಗಿ, ಪೂರ್ಣ ಸ್ವಾತಂತ್ರ್ಯವಿಲ್ಲದೇ ಜೀವನ ನಡೆಸುವುದು ಸಾಮಾನ್ಯವಲ್ಲ. ಹಾಗೆ ಜೀವಿಸುತ್ತಲೇ, ಬರವಣಿಗೆಯನ್ನು ಕೈಗೊಳ್ಳುವುದು ಮತ್ತು ನಿರಂತರವಾಗಿ ಕಲೆಗಳ ಜೊತೆಗೆ ತನ್ನನ್ನು ತೊಡಗಿಕೊಳ್ಳುವುದೂ ನಾವು ಪ್ರತಿದಿನ ನೋಡುವ ಮಾತಲ್ಲ. ಇರಾನಿನ ಖೊಮೇನಿ ಕೊಟ್ಟ ಫತ್ವಾದ ದಶಕಗಳ ನಂತರ ತಲೆತಿರುಕನೊಬ್ಬ ಮಾರಣಾಂತಿಕವಾಗಿ ರಶ್ದಿಯ ಮೇಲೆ ಹಲ್ಲೆ ಮಾಡುತ್ತಾನೆ. ಆದರೆ ರಶ್ದಿ ಬದುಕುಳಿಯುತ್ತಾರೆ. ಈ ಹಲ್ಲೆಯಿಂದಾಗಿ ಅವರು ತಮ್ಮ ಒಂದು ಕಣ್ಣನ್ನು ಕಳೆದುಕೊಂಡರೂ, ಜೀವನೋತ್ಸಾಹ ಮತ್ತು ವೈಚಾರಿಕತೆಯನ್ನು ಕಳೆದುಕೊಳ್ಳುವುದಿಲ್ಲ. ಈ ಎಲ್ಲ ಲೇಖನಗಳೂ ಆ ಹಲ್ಲೆಗೆ ಮೊದಲೇ ಬರೆದವು ಮತ್ತು ಮೊದಲೇ ಪ್ರಕಟಗೊಂಡವು. ಆದರೂ ಈ ಲೇಖನಗಳನ್ನು ಬರೆದ ವ್ಯಕ್ತಿ ನಿಷ್ಕಾರಣವಾಗಿ ಸಾಹಿತ್ಯೇತರ ಕಾರಣಗಳಿಗೆ ಟೀಕೆ ಮತ್ತು ದ್ವೇಷಕ್ಕೆ ಒಳಗಾದರು ಎನ್ನುವುದನ್ನು ನಾವು ಮರೆಯಲಾಗುವುದಿಲ್ಲ. ಇದಕ್ಕೆ ಮೂಲ ಪ್ರೇರಣೆ ಅವರ ನಿರಂತರ ಓದು, ಆಸಕ್ತಿ, ಕುತೂಹಲ ಮತ್ತು ಪ್ರಯೋಗಶೀಲತೆಯೇ ಇರಬಹುದು.



ವಿಲಿಯಂ ಫಾಕ್ನರ್ ಕಟ್ಟಿದ ಕಾಲ್ಪನಿಕ ನಾಡು ಯೋಕ್ನಾಫಟಾಫಾ ಮತ್ತು ಅವನ ಸಾಹಿತ್ಯಲೋಕದ ಬಗ್ಗೆ ಸಾಕಷ್ಟು ಬರವಣಿಗೆಯಿದೆ. ಅಮೆರಿಕದಿಂದ